# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಎಸ್‌ಸಿ ನಂ. 56/2022

Addl. witness / ಪಿಡಬ್ಲ್ಯು: 20

ದಿನಾಂಕ: 13.08.2025

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ: ಬಸವರಾಜ ಕೋಟಿ |
| ತಂದೆ ಹೆಸರು | : | ಅಶೋಕ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಹಿರಿಯ ವೈಜ್ಞಾನಿಕ ಅಧಿಕಾರಿಗಳು, FSL, ಕಲಬುರ್ಗಿ |
| ವಾಸ ಸ್ಥಳ | : | ಕಲಬುರ್ಗಿ |

(ಸಾಕ್ಷಿಯು ವಿಡಿಯೋ ಕಾನ್ಫರೆನ್ಸ ಮೂಲಕ ಸಾಕ್ಷ್ಯವನ್ನು ನುಡಿದಿರುತ್ತಾರೆ.)

ಕಲಬುರ್ಗಿಯ FSL ಕಚೇರಿಯಲ್ಲಿರುವ ಕ್ವಾಲಿಟಿ ಕಂಟ್ರೋಲ್ ಕಚೇರಿಯಲ್ಲಿರುವ ವಿಡಿಯೋ ಕಾನ್ಫರೆನ್ಸ ಕೊಠಡಿಯಲ್ಲಿ ಸಾಕ್ಷಿದಾರರು ಹಾಜರಿದ್ದಾರೆ. ಡಾ: ಮಲ್ಲಿಕಾರ್ಜುನ, ಅಸಿಸ್ಟಂಟ ಡೈರೆಕ್ಟರ ಇವರನ್ನು ರಿಮೋಟ್ ಪಾಯಿಂಟ್ ಕೊ-ಆರ್ಡಿನೇಟರ್ ಎಂದು ನೇಮಿಸಲಾಯಿತು. ವಿಡಿಯೋ ಕಾನ್ಫರೆನ್ಸ ಮೂಲಕ ಸಾಕ್ಷಿಯನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ. ವಿಡಿಯೋ ಸಂಪರ್ಕವನ್ನು ಗೂಗಲ್ ಮೀಟ್ http://meet.google.com/mff-voxg-qao ಮೂಲಕ ಕಲ್ಪಿಸಿಕೊಳ್ಳಲಾಗಿದೆ. ನೆಟ್ ವರ್ಕನಲ್ಲಿ ಯಾವುದೇ ತೊಂದರೆ ಇಲ್ಲ. ಆರೋಪಿ ನ್ಯಾಯಾಲಯದ ವಿ.ಸಿ. ಮೂಲಕ ಹಾಜರ ಇದ್ದು ಮತ್ತು ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರ ಇರುತ್ತಾರೆ. ಆಡಿಯೋ ಮತ್ತು ವಿಡಿಯೋ ಸ್ಪಷ್ಟವಾಗಿದೆ.

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ನಾನು ದಿನಾಂಕ: 23.05.2022 ರಿಂದ 25.05.2022 ರ ವರೆಗೆ ವೈಜ್ಞಾನಿಕ ಅಧಿಕಾರಿಯಾಗಿ ಆರ್.ಎಫ್.ಎಸ್.ಎಲ್. ಬೆಳಗಾವಿ ಯಲ್ಲಿ ಕೆಲಸ ಮಾಡಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕ: 17.03.2022 ರಂದು ಈ ಪ್ರಕರಣದಲ್ಲಿ ಜಪ್ತಾದ ಸುಸ್ಥಿತಿಯಲ್ಲಿದ್ದ ಒಟ್ಟು 7 ಸೀಲಾದ ವಸ್ತುಗಳನ್ನು ಚಾಸಾ-22 ರವರು ತಂದು ನಮ್ಮ

ಕಚೇರಿಯಲ್ಲಿ ಕೊಟ್ಟಿದ್ದು, ಸದರಿ ವಸ್ತುಗಳನ್ನು ದಿನಾಂಕಃ 23.05.2022 ರಂದು ನಮ್ಮ ಮೇಲಾಧಿಕಾರಿಗಳ ಆದೇಶದಂತೆ ನಾನು ಪರೀಕ್ಷೆಗಾಗಿ ಪಡೆದುಕೊಂಡಿರುತ್ತೇನೆ. ಸದರಿ ವಸ್ತುಗಳು ಸುಸ್ಥಿತಿಯಲ್ಲಿ ಇದ್ದವು ಮತ್ತು ಸೀಲಾಗಿದ್ದವು ಮತ್ತು ಅವುಗಳು ಮಾದರಿ ಸೀಲಿನೊಂದಿಗೆ ಹೋಲಿಕೆಯಾಗಿದ್ದವು.

3. ಅದೇ ದಿನದಂದು ನಾನು ಅವುಗಳನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದರಿ ವಸ್ತುಗಳು ಈ ಕೆಳಕಂಡಂತೆ ಇದ್ದವು.

1) Blood scrappings, 2) One banian, 3) One underwear, 4) One lungi, 5) One knife, 6) One machchu and 7) One shirt.

**4. ನಂತರ ಈ ಕೆಳಕಂಡಂತೆ ನಾನು ವರದಿಯನ್ನು ನೀಡಿರುತ್ತೇನೆ.**

1) Blood stain detected in article No. 1, 2, 3, 4, 5 and 7.

2) Blood stain was not detected in article No.6.

3) Article No. 1, 2, 3, 4 5 and 7 were stained with human blood.

4) Article No. 1, 2, 3, 4 5 and 7 were stained with "B" group of blood.

**4.** ಆ ಬಗ್ಗೆ ನಾನು ಕೊಟ್ಟ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-37 ಎಂದು ಗುರುತಿಸಲಾಗಿದ್ದು, **ನಿಪಿ-37 ರ ಮೇಲೆ ಸಾಕ್ಷಿಯ ಮೂರು ಸಹಿಗಳು ಇದ್ದು, ಕೊನೆಯ ಪುಟದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-37(ಬಿ) ಎಂದು ಗುರುತಿಸಲಾಯಿತು.**

5. ಪರೀಕ್ಷೆ ಮಾಡಿದ ನಂತರ ಸದರಿ ವಸ್ತುಗಳನ್ನು ಪುನಃ ಪ್ಯಾಕ ಮಾಡಿ, ಸೀಲ್ ಮಾಡಿ, ಮಾದರಿ ಸೀಲಿನೊಂದಿಗೆ ಸಂಬಂಧಿಸಿದ ಪೋಲೀಸರಿಗೆ ಮರಳಿ ಕಳಿಸಿಕೊಡಲಾಗಿರುತ್ತದೆ.

**6. ಮಾದರಿ ಸೀಲನ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-38 ಎಂದು, ಸಾಕ್ಷಿಯ ಸಹಿಯನ್ನು ನಿಪಿ-38(ಎ) ಎಂದು ಗುರುತಿಸಲಾಯಿತು.**

7. ನಾನು ಪರೀಕ್ಷೆ ಮಾಡಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಅವುಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.5, 2, 3, 4, 6, 7 ಮತ್ತು 8 ಎಂದು ಕ್ರಮವಾಗಿ ಗುರುತಿಸಲಾಗಿರುತ್ತದೆ.

**ಪಾಟಿ ಸವಾಲುಃ ಶ್ರೀ ಎಸ್.ವಿ. ಗ್ರಾಮಪುರೋಹಿತ, ಆರೋಪಿ (CLADC) ಪರ ವಕೀಲರಿಂದಃ**

(ಶ್ರೀ ಜಿ.ಬಿ. ಗೌರಿ ವಕೀಲರು ಶ್ರೀ ಎಸ್.ವಿ. ಗ್ರಾಮಪುರೋಹಿತ ವಕೀಲರು ಇಂದು ರಜೆಯ ಮೇಲೆ ಇರುತ್ತಾರೆ ಎಂದು ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ, ಪಾಟಿ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಗದಗ